(6) ಪ್ರಕಟಣೆ

ಅಧ್ಯಕ್ಷರು : ಇದೊಂದು ಪ್ರಕಟಣೆ ಇದೆ. ಕರ್ನಾಟಕ ವಿಧಾನಪರಿಷತ್ತಿನ ಕಾರ್ಯವಿಧಾನ ಮತ್ತು ನಡವಳಿಕೆ ನಿಯಮ 118ರ ಮೇರೆಗೆ ಕರ್ನಾಟಕ ವಿಧಾನಪರಿಷತ್ತು ದಿನಾಂಕ: 23ನೇ ಜುಲೈ 2002 ರಂದು ಕರ್ನಾಟಕ ನೀರಾವರಿ ಮತ್ತು ಇತರ ಕೆಲವು ಕಾನೂನು 2ನೇ ತಿದ್ದುಪಡಿ ವಿಧೇಯಕ, 2002 ನ್ನು ಯಾವುದೇ ತಿದ್ದುಪಡಿಗಳಿಲ್ಲದೆ ವಿಧಾನಪರಿಷತ್ತು ಅಂಗೀಕರಿಸಿದೆ. ವಿಧಾನಸಭೆಯಲ್ಲಿ ಅಂಗೀಕರಿಸಬೇಕೆಂದು ಕೋರಿರುತ್ತಾರೆ. ಈ ಸದನವನ್ನು ನಾಳೆ ಬೆಳಿಗ್ಗೆ 11-00 ಗಂಟೆವರೆಗೆ ಮುಂದೂಡುತ್ತಿದ್ದೇವೆ. ಈಗ ಸಭೆಯು ಬೆಳಿಗ್ಗೆ 11-00 ಸೇರುವುದು.

(ಸದನವು ಸಂಜೆ: 7 ಗಂಟೆ 17 ನಿಮಿಷಕ್ಕೆ ಮುಂದೂಡಲ್ಪಟ್ಟು ಪುನಃ ದಿನಾಂಕ:24ನೇ ಜುಲೈ 2002ರ ಬುಧವಾರದಂದು ಬೆಳಿಗ್ಗೆ 11-00 ಗಂಟೆಗೆ ಸೇರಲು ನಿಶ್ಚಯಿಸಿತು.)

(7) ಅನುಬಂಧ - I

ಯಲಹಂಕ ನಗರಸಭೆಯ ವ್ಯಾಪ್ತಿಯಲ್ಲಿ ಕುಡಿಯುವ ನೀರಿನ ಯೋಜನೆ

966 (1469) - ಶ್ರೀ ಅಂಗಾರ ಎಸ್. (ಸೂಳ್ಯ) : ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಯಲಹಂಕ ನಗರ ಸಭೆಯು 4ನೇ ಹಂತದಲ್ಲಿ ಕುಡಿಯುವ ನೀರಿನ ಸರಬರಾಜಿಗೆ ಇತ್ತೀಚೆಗೆ ಎಷ್ಟು ವೆಚ್ಚದಲ್ಲಿ ಹಾಗೂ ಎಷ್ಟು ಬೀದಿ ನಲ್ಲಿಗಳನ್ನು ಅಳವಡಿಸಿದೆ;

ಆ) ಇದರ ಕಾಮಗಾರಿ ಪೂರ್ತಿಯಾಗಿದೆಯೇ; ಕೆಲವು ಬೀದಿಗಳಲ್ಲಿ ನೀರಿನ ಪೈಪು ಹಾಗೂ ನಲ್ಲಿಗಳನ್ನು ಅಳವಡಿಸದಿರಲು ಕಾರಣಗಳೇನು; ಅಂತಹ ಬೀದಿಗಳ ವಿವರಗಳನ್ನು ನೀಡುವುದು;

ಇ) ಇದೇ ಪ್ರದೇಶದ 707 ಮನೆಗಳ ಗೃಹ ಸಮುಚ್ಚಯದ 3ನೇ ಮುಖ್ಯ ರಸ್ತೆಯಲ್ಲಿ ಅರ್ಧಕ್ಕೆ ಮಾತ್ರ ನೀರಿನ ಪೈಪು ಅಳವಡಿಸಿ ಉಳಿದ ಅರ್ಧಕ್ಕೆ ಪೈಪು ಹಾಗೂ ನಲ್ಲಿಗಳನ್ನು ಅಳವಡಿಸದೆ ತಾರತಮ್ಯ ಮಾಡಿರಲು ಕಾರಣಗಳೇನು;

ಈ) ಈಗಲಾದರೂ ಕುಡಿಯುವ ನೀರಿಗೆ ತೀವ್ರ ಅಭಾವವಿರುವ 3ನೇ ಮುಖ್ಯ ರಸ್ತೆಯಲ್ಲಿ ಅಳವಡಿಸದೆ ಬಿಟ್ಟು ಹೋಗಿರುವ ಭಾಗದಲ್ಲಿ ನೀರಿನ ಪೈಪು ಹಾಗೂ ನಲ್ಲಿ ಅಳವಡಿಸಲು ಕ್ರಮ ಕೈಗೊಳ್ಳಲಾಗುವುದೆ?

ಶ್ರೀ ಎಸ್ ಎಂ. ಕೃಷ್ಣ (ಮುಖ್ಯ ಮಂತ್ರಿಗಳು) :

ಅ) 4ನೇ ಹಂತದಲ್ಲಿ ಬಿ. ಡಬ್ಲ್ಯೂ ಎಸ್.ಎಸ್.ಬಿ. ವತಿಯಿಂದ ಪೂರ್ಣ ನೀರಿನ ಸರಬರಾಜಾಗುತ್ತಿದ್ದು, ತೀವ್ರ ಅಭಾವವಿರುವ ಕಡೆಗಳಲ್ಲಿ ಮಾತ್ರ ನಗರಸಭೆ ವತಿಯಿಂದ ಬೋರ್‌ವೆಲ್ ಕೊರೆದು ಸಾರ್ವಜನಿಕ ನಲ್ಲಿಗಳ ಮೂಲಕ 1.90 ಲಕ್ಷ ರೂ. ವೆಚ್ಚದಲ್ಲಿ ನೀರು ಸರಬರಾಜು ಮಾಡಲಾಗುತ್ತಿದೆ. ಈ ಪ್ರದೇಶದಲ್ಲಿ 49 ಸಾರ್ವಜನಿಕ ನಲ್ಲಿ ಹಾಕಲಾಗಿದೆ.

ಆ) ಕಾಮಗಾರಿ ಪೂರ್ತಿ ಆಗಿರುವುದಿಲ್ಲ. ತೀವ್ರ ಅಭಾವವಿರುವ ಬಗ್ಗೆ ಮಾಹಿತಿ ಬಂದಲ್ಲಿ ಅಂತಹ ಕಡೆಗಳಲ್ಲಿ ಕೊಳವೆ ಸಾಲನ್ನು ಅಳವಡಿಸಲು ಕ್ರಮ ತೆಗೆದುಕೊಳ್ಳಲಾಗುವುದು.

ಇ) ಈ ಪ್ರದೇಶದಲ್ಲಿ ನಲ್ಲಿಗಳನ್ನು ಅಳವಡಿಸಲು ನಗರಸಭೆಯಿಂದ ತಾರತಮ್ಯ ಮಾಡಿರುವುದಿಲ್ಲ. ಉಳಿದ ಅರ್ಧಕ್ಕೆ ಪೈಪು, ನಲ್ಲಿ ಅಳವಡಿಸಲು ಸಾಮಗ್ರಿಗಳ ಕೊರತೆಯಿಂದ ಕಾಮಗಾರಿ ಪೂರ್ಣ ಮಾಡಲಾಗಿಲ್ಲ. ಸಾಮಗ್ರಿ ಪಡೆದು ಪೂರ್ಣಗೊಳಿಸಲಾಗುವುದು.

ಈ) ಹೌದು.